ಗೋಲಿಬಾರ್ ಆಗಿ ಅನೇಕ ಜನ ಸತ್ತಿದ್ದಾರೆ. ಈ ಸದನ ಮುಗಿದು ನಾವು ಆ ಕ್ಷೇತ್ರಗಳಿಗೆ ಹೋದಂತಹ ಸಂದರ್ಭದಲ್ಲಿ ರೈತರು ನಮ್ಮ ಮನೆಗಳಿಗೆ ಮುತ್ತಿಗೆ ಹಾಕುವಂತಹ ಸಂದರ್ಭ ಒಂದು ಕಡೆ. ಕೃಷಿ ಮಾರುಕಟ್ಟೆಗೆ ಮುತ್ತಿಗೆ ಹಾಕುವಂತಹ ಸಂದರ್ಭ ಒಂದು ಕಡೆ. ಗಲಭೆಗಳು ಆಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ವಾತಾವರಣ ಇದೆ. ಆ ದೃಷ್ಟಿಯಿಂದ ಸರ್ಕಾರ ನಿಖರವಾದ ಮಾಹಿತಿ ಕೊಡಬೇಕು ಮತ್ತು ಹಣ ಬಿಡುಗಡೆ ಮಾಡುವಂತಹ ಕೆಲಸ ಮಾಡಬೇಕು. ನಿರಾಸೆ ಮೂಡಿಸಿರುವಂತಹ ಕೊಬ್ಬರಿ ಖರೀದಿ ಎನ್ನುವ ಮಾತು ಪತ್ರಿಕೆಗಳಲ್ಲಿ ಬಂದಿದೆ. ಆ ಪತ್ರಿಕಾ ಹೇಳಿಕೆಯ ಕಾಪಿ ತಮಗೆ ಕಳುಹಿಸಿ ಕೊಡುತ್ತೇನೆ. ನಿನ್ನೆ ಕೂಡ ಮಾನ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ನಾಳೆಯೇ ಹಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಹೇಳಿದರು. ಈ ಮಾತು ಹೇಳಿ 3-4 ದಿವಸ ಆಗಿದೆ ಇದುವರೆಗೂ ಏನೂ ವ್ಯವಸ್ಥೆ ಮಾಡಿಲ್ಲ. ಈ ಸದನ ಮುಗಿದು ನಾಳೆ ನಮ್ಮ ಕ್ಷೇತ್ರಗಳಿಗೆ ಹೋದಾಗ ರೈತರು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಗಲಾಟೆ ಮಾಡುವಂತಾದ್ದು ಇದೆ. ಕೃಷಿ ಮಾರುಕಟ್ಟೆಯಲ್ಲಿ ಗಲಾಟೆ ಮಾಡುವಂಥಾದ್ದು ಇದೆ. ಸರ್ಕಾರಿ ಕಛೇರಿಗಳಿಗೆ ನುಗ್ಗತಕ್ಕಂಥಾದ್ದು ಈ ವ್ಯವಸ್ಥೆಯಾಗುತ್ತದೆ ಸರ್ಕಾರದ ಚೆಕ್‌ಗಳು ಏಕೆ ಬೌನ್ಸ್ ಆಗಿವೆ ಎನ್ನುವಂತಾದ್ದನ್ನು ನಾನು ಪ್ರಶ್ನೆಮಾಡುತ್ತೇನೆ. ಇವತ್ತು ತುರುವೇಕೆರೆ ತಿಪಟೂರುಗಳಲ್ಲಿ ಕೊಂಡಿರತಕ್ಕ ಕೊಬ್ಬರಿಗೆ ರಸೀದಿಯನ್ನು ಕೊಟ್ಟಿದ್ದರೂ ಸಹ ಹಳ್ಳಿಯ ರೈತರಿಗೆ ಕೊಟ್ಟಿರತಕ್ಕಂಥ ಚೆಕ್‌ಗಳು ಬೌನ್ಸ್ ಆಗಲು ಕಾರಣವೇನು? ಇದಕ್ಕೆ ಸರ್ಕಾರ ನಿಖರವಾಗಿರತಕ್ಕಂಥ ಮಾಹಿತಿ ಕೊಡಬೇಕು. ಮತ್ತು ತಕ್ಷಣ ಆವರ್ತ ನಿಧಿಯಲ್ಲಿರತಕ್ಕ 29.16 ಕೋಟಿ ರೂಪಾಯಿ ಸರ್ಕಾರದಲ್ಲಿ ಇದೆ ಎಂದು ಏನು ಹೇಳಿದ್ದಾರೆ ಆ ಹಣವನ್ನು ತಕ್ಷಣ ಬಿಡುಗಡೆ ಮಾಡಿ ಬೌನ್ಸ್ ಆಗಿರುವಂತಹ ಚೆಕ್‌ಗಳನ್ನು ವಾಪಸ್ಸು ತರಿಸಿಕೊಂಡು ತಕ್ಷಣ ಆ ರೈತರಿಗೆ ಹಣ ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಕೃಷಿ ಸಚಿವರು ಬರಲಿ. ಆ ಮೇಲೆ ಉತ್ತರ ಕೊಡುತ್ತಾರೆ.

ವಿಷಯ: (ii) ಕೊಪ್ಪಳ ಪುರಸಭೆ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಗಳ ಅಗಲೀಕರಣ

ಶ್ರೀ ಕರಡಿ ಸಂಗಣ್ಣ (ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಕೊಪ್ಪಳ ಪುರಸಭೆ ವ್ಯಾಪ್ತಿಯಲ್ಲಿ ಬರತಕ್ಕಂಥ ಮುಖ್ಯವಾದ ರಸ್ತೆ. ಈಗ ಈ ರಸ್ತೆಯ ಅಗಲೀಕರಣ ಪ್ರಾರಂಭಗೊಳಿಸಿದ್ದಾರೆ. ಇದರಿಂದ 14 ಸಾವಿರ ಅಂಗಡಿಗಳು ಮತ್ತು ಅಂಬೇಡ್ಕರ್ ಯೋಜನೆ ಅಡಿಯಲ್ಲಿ ಸುಮಾರು 20 ಮನೆಗಳನ್ನು ಕೆಡವಿದ್ದಾರೆ. ಅಲ್ಲಿನ ಜಿಲ್ಲಾಧಿಕಾರಿಗಳು ಈ ರಸ್ತೆ ದುರಸ್ಥಿ ಮತ್ತು ಒಳಚರಂಡಿ ವ್ಯವಸ್ಥೆ ಹಾಗೂ ಪರಿಹಾರ ಕೊಡಲು 100 ಲಕ್ಷ ರೂಪಾಯಿಗಳು ಬೇಕಾಗುತ್ತದೆ ಅಂತ ಹೇಳಿ ಈಗಾಗಲೇ ಮುನಿಸಿಪಲ್ ಡೈರೆಕ್ಟರ್‌ಗೆ ಪತ್ರ ಬರೆದಿದ್ದಾರೆ. ಆದ್ದರಿಂದ ಸರ್ಕಾರ ಆ ಹಣ ಕೊಡುವ ವ್ಯವಸ್ಥೆ ಮಾಡಬೇಕು. ಇದರ ಜೊತೆಯಲ್ಲಿ ಅಂಬೇಡ್ಕರ್ ಯೋಜನೆಯಡಿಯಲ್ಲಿ ಕೊಟ್ಟಿದ್ದ ನಿರ್ಗತಿಕರ ಮನೆಗಳು ಕೂಡ ಹೋಗಿವೆ. ಸುಮಾರು 20 ಮನೆಗಳು ಹೋಗಿವೆ, ಆ ಮನೆಗಳನ್ನು ಸರ್ಕಾರ ಪುನಃ ಕಟ್ಟಿಸಿಕೊಡುತ್ತಾರೆಯೇ ಈ ಬಗ್ಗೆ ಉತ್ತರ ಕೊಡಬೇಕೆಂದು ನಾನು ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಇಲ್ಲ. ಉತ್ತರ ಕೊಡಿಸುತ್ತೇನೆ.

ವಿಷಯ: (iii) ಕೊಳ್ಳೇಗಾಲ ತಾಲ್ಲೂಕು ಬಂಡಳ್ಳಿಯಲ್ಲಿ ಪೊಲೀಸರ ಗೋಲಿಬಾರಿನಿಂದ ಮೃತನಾದ ನಂಗಪ್ಪ ಎಂಬುವರ ವಿಚಾರದಲ್ಲಿ ನ್ಯಾಯಾಂಗ ತನಿಖೆಗೆ ಆಜ್ಞೆ ಹೊರಡಿಸುವ ಬಗ್ಗೆ.

ಶ್ರೀ ಎಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಕೊಳ್ಳೇಗಾಲ ತಾಲ್ಲೂಕು ಬಂಡಳ್ಳಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಹಾರಿಸಿದ ಗೋಲಿಬಾರ್‌ನಿಂದ ಶ್ರೀ ನಾಗಪ್ಪ ಎನ್ನುವವರು ಮೃತ ಪಟ್ಟಿರುವ ವಿಚಾರ ತಮಗೆ ಗೊತ್ತಿದೆ. ಈ ಸಂದರ್ಭದಲ್ಲಿ ನಾನು, ಶ್ರೀ ಭೈರೇಗೌಡರು ಮತ್ತು ಕೃಷ್ಣ ಮೂರ್ತಿಯವರು ಆ ಸ್ಥಳದಲ್ಲಿ ಧರಣಿ ಮಾಡಿ ಈ ಬಗ್ಗೆ ನ್ಯಾಯಾಂಗ ತನಿಖೆ ಆಗುವವರೆಗೂ ನಾವು ಆ ಶವವನ್ನು ತೆಗೆಯುವುದಿಲ್ಲವೆಂದು ಹೇಳಿ ಪ್ರತಿಭಟನೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಭೈರೇಗೌಡರು ಇಡೀ ರಾತ್ರಿ ಆ ಶವದ ಜೊತೆಯಲ್ಲಿ ಮಲಗಿದ್ದು ಮಾರನೇ ದಿನ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿಗೆ ಬಂದು ಒಂದು ಶಾಂತಿ ಸಭೆಯನ್ನು ಮಾಡಿ ನ್ಯಾಯಾಂಗ ತನಿಖೆಯನ್ನು ನಡೆಸುವುದಕ್ಕೆ ನಾನು ವ್ಯವಸ್ಥೆಯನ್ನು ಮಾಡುತ್ತೇನೆಂದು ಮತ್ತು ತಪ್ಪಿತಸ್ಥರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ ಒಂದು ಆಶ್ವಾಸನೆಯನ್ನು ಕೊಟ್ಟರು, ಅನಂತರ ಆ ಶವವನ್ನು ಅಂತ್ಯ ಸಂಸ್ಕಾರಕ್ಕೆ ತೆಗೆದುಕೊಂಡು ಹೋದರು. ಈ ಒಂದು ವಿಚಾರದಲ್ಲಿ ಸರ್ಕಾರ ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಬಗ್ಗೆ ನಮಗೆ ಮಾಹಿತಿ ಇಲ್ಲ. ಈ ವಿಚಾರದಲ್ಲಿ ನ್ಯಾಯಾಂಗ ತನಿಖೆಯನ್ನು ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಈ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಯಾವಾಗ ಚಿಚ್ಛೆ ಮಾಡುತ್ತದೆ ಸರ್ಕಾರ ಎನ್ನುವುದನ್ನು ತಿಳಿಸಬೇಕೆಂದು ನಾನು ಹೇಳಿಕೊಳ್ಳುತ್ತೇನೆ.

+ ಶ್ರೀ ಸಿ ಭೈರೇಗೌಡ (ಚೇಮಂಗಲ್): ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಬಂದ ಮೇಲೆ ಒಂದು ಹೊಸ ಸಂಸ್ಕೃತಿ ಪ್ರಾರಂಭವಾಗಿದೆ. ಅದೇನೆಂದರೆ ಪೊಲೀಸಿನವರು, ಸರ್ಕಾರಿ ಅಧಿಕಾರಿಗಳು ಇವರೆಲ್ಲರೂ ಕೂಡ ಕಾಂಗ್ರೇಸ್ ಮುಖಂಡರ ಮನೆಗಳನ್ನು ಕಾಯುವಂತಹ ಕಾವಲುಗಾರರು ಆಗಿದ್ದಾರೆ. ಇದು ಒಂದೇ ಕಡೆ ಅಲ್ಲ. ರಾಜ್ಯದ ಅನೇಕ ಕಡೆ ಈ ರೀತಿಯಾಗಿ ನಡೆಯುತ್ತಾ ಇರುತಕ್ಕಂಥಾ ಉದಾಹರಣೆಗಳು ಇವೆ. ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುತಕ್ಕಂಥಾದ್ದು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಉದ್ಘಾಟನೆ. ಸುಮಾರು ಎರಡು ವರ್ಷ ಆಗಿದೆ ಈ ಕಟ್ಟಡ ಕಟ್ಟಿಸಿ ಮಾನ್ಯ ಮಲಕರೆಡ್ಡಿಯವರಿಗೂ ಕೂಡ ಗೊತ್ತಿರಬಹುದು. ಅದನ್ನು ಉದ್ಘಾಟನೆ ಮಾಡುವ ಕಾರ್ಯಕ್ರಮವೂಸ್ಕರ ನಿಲ್ಲಿಸಿಕೊಂಡಿದ್ದರು, ಆ ಕಟ್ಟಡ ಉದ್ಘಾಟನೆ ಆಗಿರಲಿಲ್ಲ. ಇಷ್ಟು ಪೂರ್ತಿ ಖರ್ಚು ಮಾಡಿ ಕಟ್ಟಡ ಕಟ್ಟಿ ಈ ಕಟ್ಟಡ ಹಾಗೆ ಇದೆಯಲ್ಲ ಅಂತ ಹೇಳಿ ಜಿಲ್ಲಾ ವೈದ್ಯಾಧಿಕಾರಿಗಳು ಅಲ್ಲಿನ ವೈದ್ಯರಿಗೆ ಹೇಳುತ್ತಾರೆ. ಆ ಕಟ್ಟಡದ ಬೀಗ ತೆಗೆದು ನೀವು ಅಲ್ಲಿ ಕೆಲಸ ಮಾಡಿ ಅಂತ ಹೇಳುತ್ತಾರೆ. ಈ ರೀತಿ ಹೇಳಿದಂತಹ ಸಂದರ್ಭದಲ್ಲಿ ಅಲ್ಲಿನ ವೈದ್ಯರು ಆ ಗ್ರಾಮದಲ್ಲಿ ಈ ಆಸ್ಪತ್ರೆ ಕಟ್ಟಡ ಕಟ್ಟಲು ಜಾಗ ಇರಲಿಲ್ಲ ಸ್ವಂತ ಜಮೀನನ್ನು ಒಬ್ಬರು ದಾನಿಗಳು ದಾನ ಮಾಡುತ್ತಾರೆ. ಅವರನ್ನು ಕರೆದು ಗ್ರಾಮ ಪಂಚಾಯಿತಿಯವರನ್ನು ಕರೆದು ಆ ಕಟ್ಟಡದ ಬೀಗ ತೆಗೆದು ಅಲ್ಲಿ ಕೆಲಸ ಮಾಡುವುದಕ್ಕೆ ಆ ವೈದ್ಯರು ಪ್ರಾರಂಭ ಮಾಡುತ್ತಾರೆ.